ಈ ದಿನ ದಿನಾಂಕಃ 13.07.2026 ರಂದು ಸಾಕ್ಷಿಯನ್ನು ಇಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಂದುವರೆದ ಪಾಟೀಸವಾಲು 1 ರಿಂದ 3ನೇ ಪ್ರತಿವಾದಿಗಳ ಪರ ಶ್ರೀ ಎಂ ಕೆ ವಕೀಲರಿಂದಃ**

ನನಗೆ ಈ ಹಿಂದೆ ಸಾಕ್ಷಿ ನೀಡಿರುವ ವಿಚಾರ ನನಗೆ ಗೊತ್ತಿರುತ್ತದೆ. ಈ ಪ್ರಕರಣವನ್ನು ಸರ್ವೆ ನಂ. 93/1ರ ಒಂದೇ ಆಸ್ತಿಗೆ ದಾವೆಯನ್ನು ಸಲ್ಲಿಸಿರುತ್ತೇನೆ. ನಾನು ಈಗಾಗಲೇ ನ್ಯಾಯಾಲಯಕ್ಕೆ ಸಲ್ಲಿಸಿರುವ ದಾಖಲೆಗಳನ್ನು ಹೊರತು ಪಡಿಸಿ ದಾವಾ ಆಸ್ತಿಯು ನಮ್ಮ ಒಟ್ಟುಕುಟುಂಬದ ಆಸ್ತಿ ಎಂದು ತೋರಿಸಲು ಬೇರೆ ಯಾವುದೇ ದಾಖಲೆಗಳು ಇರುವುದಿಲ್ಲ.

ಈ ಪ್ರಕರಣದ ಪ್ರತಿವಾದಿ 1 ಮತ್ತು 2 ರವರು ಸಲ್ಲಿಸಿರುವ ತಕರಾರಿನ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ಪ್ರತಿವಾದಿ 1 ಮತ್ತು 2 ರವರು ಸಲ್ಲಿಸಿರುವ ತಕರಾರಿನ ವಿಚಾರಗಳನ್ನು ತಿಳಿದುಕೊಂಡು ಎದುರುತ್ತರವನ್ನು ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ. ಸದರಿ ಮರುತ್ತರವನ್ನು 2-3 ತಿಂಗಳ ಹಿಂದೆ ಸಲ್ಲಿಸಿರುತ್ತೇನೆ. ಈ ಪ್ರಕರಣದಲ್ಲಿ ಇತರೆ ಹಕ್ಕುದಾರರನ್ನು ಪ್ರಕರಣಕ್ಕೆ ಸೇರಿಸಿದ ನಂತರ ಸದರಿಯವರು ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಿರುವ ಬಗ್ಗೆ ನನಗೆ ಗೊತ್ತಿಲ್ಲ. ಈ ಪ್ರಕರಣ ನಡೆಯುವಾಗ ನಾನು ಈ ಪ್ರಕರಣದಲ್ಲಿನ ಹಕ್ಕುದಾರರನ್ನು ಪ್ರಕರಣಕ್ಕೆ ಸೇರಿಸಿದ ನಂತರ ಸದರಿಯವರು ಯಾರು ಸಹ ನ್ಯಾಯಾಲಯಕ್ಕೆ ಹಾಜರಾಗಿ ತಕರಾರು ಸಲ್ಲಿಸಿದ್ದಾರೋ ಇಲ್ಲವೊ ಎಂದು ನಾನು ತಿಳಿದುಕೊಂಡಿಲ್ಲ ಎಂದರೆ ಎಲ್ಲರ ಪರವಾಗಿ ನಾನೇ ಪ್ರಕರಣ ನಡೆಸುತ್ತಿದ್ದೇನೆ. ಎಲ್ಲಾ ಹಕ್ಕುದಾರರ ಪರವಾಗಿ ನಾನು ಈ ಪ್ರಕರಣವನ್ನು ನಡೆಸುತ್ತಿದ್ದೇನೆ ಎಂದು ಈ ದಾವೆಯನ್ನು ಹೂಡುವ ಸಮಯದಲ್ಲಿ ನಾನು ಸದರಿ ವಿಚಾರವನ್ನು ಹೇಳಿರುತ್ತೇನೆ.

ದಾವಾ ಆಸ್ತಿಯು ಮೂಲತಃ ಗೋಪಾಲನಾಯ್ಕ ರವರ ದತ್ತುಪುತ್ರ ಗೋವಿಂದಪ್ಪನವರ ಹೆಸರಿನಲ್ಲಿತ್ತು ಎಂದರೆ ನನಗೆ ನಿರ್ದಿಷ್ಟವಾಗಿ ನೆನಪಿಲ್ಲ. ಈ ದಾವೆಯನ್ನು ದಾಖಲು ಮಾಡುವ ಸಮಯದಲ್ಲಿ ದಾವಾ ಆಸ್ತಿಯು ಮೂಲತಃ ಯಾರ ಹೆಸರಿನಲ್ಲಿತ್ತು ಮತ್ತು ನಮಗೆ ಯಾವ ರೀತಿ ಹಕ್ಕು ಇರುತ್ತದೆ ಎಂದು ದಾವೆಯಲ್ಲಿ ಹೇಳಿರುತ್ತೇನೆ. ನನ್ನ ತಂದೆಯ ತಂದೆ ಹೆಸರು ಸಿ ಹೆಚ್ ಕೃಷ್ಣಪ್ಪ. ನನ್ನ

ಅಜ್ಜ ಸಿ ಹೆಚ್ ಕೃಷ್ಣಪ್ಪನವರಿಗೆ 3 ಜನ ಗಂಡು ಮಕ್ಕಳು ಎಂದರೆ ಸರಿ. ಪ್ರತಿವಾದಿ 1 ಮತ್ತು 2 ರವರು ಸಿ ಹೆಚ್ ಕೃಷ್ಣಪ್ಪನವರ ಕೊನೆಯ ಮಗ ವೆಂಕಟ ದಾಸಪ್ಪನವರ ಮಕ್ಕಳು ಎಂದರೆ ಸರಿ.

1958 ನೇ ಇಸವಿಯಲ್ಲಿ ಆಗಿರುವ ನಾನು ಹಾಜರುಪಡಿಸಿರುವ ವ್ಯವಸ್ಥಾ ಪತ್ರದ ಮಾಹಿತಿ ನನಗೆ ಗೊತ್ತಿರುತ್ತದೆ. ವ್ಯವಸ್ಥಾ ಪತ್ರವನ್ನು ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು ಮಾಡಿರುತ್ತಾರೆ. ಸದರಿ ವ್ಯವಸ್ಥಾ ಪತ್ರದವಲ್ಲಿ ಸಿ ಹೆಚ್ ಕೃಷ್ಣಪ್ಪನವರು ತನ್ನ ತಮ್ಮ ದಾಸಪ್ಪನವರನ್ನು ಯಾವ ರೀತಿ ಓದಿಸಿ ಮೇಲೆ ತಂದೆ ಮತ್ತು ತನ್ನ ಹಾಗೂ ತನ್ನ ಚಿಕ್ಕಪ್ಪನವರ ಕುಟುಂಬದ ಆಸ್ತಿಯ ವಿವರಗಳನ್ನು ಬರೆದು ಹಾಗೂ ಗೋವಿಂದಪ್ಪನವರಿಗೆ ಈ ದಾವಾ ಆಸ್ತಿ ಯಾವ ರೀತಿ ಬಂದಿರುತ್ತದೆ ಎಂದು ಬರೆಸಿರುತ್ತಾರೆಂದರೆ ಸರಿ. ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು ತನ್ನ ಮೂರು ಮಕ್ಕಳಿಗೆ ಆಸ್ತಿಗಳನ್ನು ನೀಡಿ ತನ್ನ ಚಿಕ್ಕಪ್ಪ ಗೋವಿಂದಪ್ಪನವರಿಗೆ ಬಂದ ಆಸ್ತಿಯನ್ನು ತನಗೆ ಉಳಿಸಿಕೊಂಡಿದ್ದರು ಎಂದರೆ ಗೋವಿಂದಪ್ಪನವರ ಆಸ್ತಿ ಎಂದು ಇರುವುದಿಲ್ಲ ಒಟ್ಟು ಕುಟುಂಬದ ಆಸ್ತಿ ಎಂದು ಉಳಿಸಿಕೊಂಡಿದ್ದರು.

ನಿಪಿ 4 ವ್ಯವಸ್ಥಾ ಪತ್ರದಲ್ಲಿ ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು ನಮ್ಮ ಚಿಕ್ಕಪ್ಪ ಗೋವಿಂದಪ್ಪ ಇವರ ಕುಟುಂಬ ನಾಗಮ್ಮ ಇವರ ಉತ್ತರಕ್ರಿಯಾದಿಗಳನ್ನು ವೆಂಕಟ ದಾಸಪ್ಪನವರಿಂದ ಮಾಡಿಸಿರುತ್ತೇನೆಯಾದ ಪ್ರಯುಕ್ತ ನನ್ನ ಅನುಭವದಲ್ಲಿ ಇರುವ ಇವರ ಪಾಲಿನ ಸ್ವತ್ತು ಅವರ ಕೋರಿಕೆಯಂತೆ ವೆಂಕಟ ದಾಸಪ್ಪನವರಿಗೆ ಸೇರತಕ್ಕದ್ದಾಗಿದೆ ಎಂದು ಬರೆಸಿದ್ದಾರೆಂದರೆ ಆ ಜಮೀನಿಗೂ ದಾವಾ ಆಸ್ತಿಗೂ ಯಾವುದೇ ಸಂಬಂದ ಇರುವುದಿಲ್ಲ. ನಿಪಿ 4 ರ ವ್ಯವಸ್ಥಾ ಪತ್ರವು ಸರಿ ಇರುತ್ತದೆ. ನಿಪಿ 4 ವ್ಯವಸ್ಥಾ ಪತ್ರದ ಪ್ರಕಾರ ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು ನನ್ನ ತಂದೆಯಾದ ರಂಗಪ್ಪ, ಗೋಪಾಲಪ್ಪ ಹಾಗೂ ವೆಂಕಟ ದಾಸಪ್ಪನವರಿಗೆ ತಲಾ 5 ಎಕರೆಯಷ್ಟು ಜಮೀನನ್ನು ನೀಡಿರುತ್ತಾರೆ ಎಂದರೆ ಸರಿ. ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು ತನ್ನ ಚಿಕ್ಕಪ್ಪ ಗೋವಿಂದಪ್ಪನವರಿಗೆ ಸೇರಿದ ಆಸ್ತಿಯನ್ನು ತನ್ನ ಕೊನೆಯ ಮಗನಾದ ವೆಂಕಟ ದಾಸಪ್ಪನವರಿಗೆ ಸೇರಬೇಕು ಎಂದು ನಿಪಿ 4

ವ್ಯವಸ್ಥಾ ಪತ್ರದಲ್ಲಿ ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು ತನ್ನ ಮೂರು ಜನ ಮಕ್ಕಳಿಗೆ ನೀಡಿದ ಆಸ್ತಿಯನ್ನು ಹೊರತು ಪಡಿಸಿ ತನ್ನ ಚಿಕ್ಕಪ್ಪ ಗೋವಿಂದಪನವರ



ಆಸ್ತಿಯನ್ನು ತನ್ನ ಕೊನೆಯ ಮಗ ವೆಂಕಟ ದಾಸಪ್ಪನವರಿಗೆ ಸೇರಬೇಕು ಎಂದು ನಿಪಿ 4 ರಲ್ಲಿ ಬರೆಸಿರುತ್ತಾರೆಂದರೆ ಆ ಆಸ್ತಿಗೂ ದಾವಾ ಆಸ್ತಿಗೂ ಯಾವುದೇ ಸಂಬಂದ ಇಲ್ಲ. ನನ್ನ ಅಜ್ಜ ಸಿ ಹೆಚ್ ಕೃಷ್ಣಪ್ಪನವರು 1908 ನೇ ಇಸವಿಯಲ್ಲಿನ ವಿಬಾಗ ಪತ್ರ ದ ಬಗ್ಗೆ ಹಾಗೂ ತನ್ನ ಮಕ್ಕಳು ಹಾಗೂ ತಮ್ಮನಿಗೆ ಸೇರಬೇಕಾದ ಆಸ್ತಿಗಳು ಮತ್ತು ಅವುಗಳ ವಿವರ ಹಾಗೂ ತನ್ನ ಚಿಕ್ಕಪ್ಪ ಗೋವಿಂದಪ್ಪನವರ ಜಮೀನಿನ ವಿಚಾರವಾಗಿಯೂ ಸವಿಸ್ತಾರವಾಗಿ ಬರೆಸಿರುತ್ತಾರೆ ಎಂದರೆ ಸರಿ.

ನ್ಯಾಯಾಲಯದ ಬೆಳಗಿನ ಅವಧಿ ಮುಗಿದಿದ್ದರಿಂದ ಮುಂದುವರೆದ ಪಾಟೀಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಪಡಿಸಲಾಯಿತು)**

**ಓ.ಹೇ.ಕೇ. ಸರಿ ಇದೆ.**

02ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ.ಚನ್ನಗಿರಿ.